ಹಾವೇರಿ ಜಿಲ್ಲೆಯಲ್ಲಿ ರೈತರಿಗೆ ಪೂರೈಕೆ ಮಾಡಿದ ಹತ್ತಿ ಬೀಜಗಳು

74(73); ಶ್ರೀ ಕೋಳಿವಾಡ ಕೆ.ಬಿ.

ಅ) ಹಾವೇರಿ ಜಿಲ್ಲೆಯಲ್ಲಿ ರೈತರಿಗೆ ಪೂರೈಕೆ ಮಾಡಿದ ಹತ್ತಿ ಬೀಜಗಳು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ; ಯಾವ ಯಾವ ತರಹದ ಕಳಪೆ ಬೀಜಗಳನ್ನು ಎಷ್ಟು ಎಕರೆ ಭೂಮಿಗೆ ಪೂರೈಸಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಈ ದಿಶೆಯಲ್ಲಿ ರೈತರಿಗೆ ಆದ ಹಾನಿಯನ್ನು ಪೂರೈಸಿ ಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೃಷ್ಣಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಹಾವೇರಿಯಲ್ಲಿ ಜಿಲ್ಲೆಯಲ್ಲಿ ಮಹಿಕೋ ಕಂಪನಿಯ ಬಿಟಿ ಹತ್ತಿ ಕನಕ ಮತ್ತು ನಿಕ್ಕಿಪ್ಲಸ್ ತಳಿಗಳು ಒಟ್ಟು 21,924 ಹೆಕ್ಟೇರ್ ಕ್ಷೇತ್ರದಲ್ಲಿ ಬೀಜ ದೋಷ, ಹವಾಮಾನ ವೈಪರೀತ್ಯ ಹಾಗೂ ಕೀಟ ಬಾದೆಯ ಕಾರಣಗಳಿಂದಾಗಿ ಬೆಳೆ ಹಾನಿಯಾಗಿರುವ ಬಗ್ಗೆ ಜಂಟಿ ಸಮೀಕ್ಷೆ ತಂಡದ ಕ್ಷೇತ್ರ ಸಮೀಕ್ಷೆಯಿಂದ ತಿಳಿಸುಬಂದಿರುತ್ತದೆ.

ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ:

ತಾಲ್ಲೂಕು	ಹಾನಿಗೊಳಗಾದ ಕ್ಷೇತ್ರ (ಹೆಕ್ಟೇರ್‌ಗಳಲ್ಲಿ)
ಹಾವೇರಿ	3372
ಬ್ಯಾಡಗಿ	2598
ಹಾನಗಲ್	1184
ಹಿರೇಕೆರೂರು	3119
ರಾಣೆಬೆನ್ನೂರು	3660
ಸವಣೂರು	3257
ಶಿಗ್ಗಾಂವ್	4734
ಒಟ್ಟು	**21924**

ಆ) ಬೆಳೆ ನಷ್ಟ ಹೊಂದಿದ ರೈತರುಗಳಿಗೆ ಸಂಬಂಧಿಸಿದ ಸಂಸ್ಥೆಯಿಂದ ಹಾಗೂ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ, (NDRF) ಯಡಿ NDRF ಮಾರ್ಗಸೂಚಿಯನ್ವಯ ಪ್ರತಿ ಹೆಕ್ಟೇರ್‌ಗೆ ₹ 4500.00 ರಂತೆ ಪರಿಹಾರವನ್ನು ವಿತರಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ರಾಣೆಬೆನ್ನೂರು ನಗರದ ಯು.ಪಿ.ಡಿ –ಎಸ್.ಎಸ್.ಐ.ಎಂ.ಟಿ. ಯೋಜನೆ

75(74); ಶ್ರೀ ಕೋಳಿವಾಡ ಕೆ.ಬಿ. (ರಾಣೇಬೆನ್ನೂರು)

ಅ) ಕೇಂದ್ರ ಯೋಜನೆಯಾದ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿಯ ಯೋಜನೆಯು ಯಾವ ಹಂತದಲ್ಲಿದೆ;

ಆ) ಹಾವೇರಿ ಜಿಲ್ಲೆಯು ವಿಶೇಷವಾಗಿ ರಾಣೆಬೆನ್ನೂರು ನಗರದ ಯು.ಐ.ಡಿ.ಎಸ್.ಎಸ್.ಎಂ.ಟಿ. ಯೋಜನೆಯು ಯಾವ ಹಂತದಲ್ಲಿದೆ;

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತತು ವಕ್ಫ್ ಸಚಿವರು.)

ಅ) ಕೇಂದ್ರ ಪುರಸ್ಕೃತ ಯೋಜನೆಯಾದ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲ ಸೌಕರ್ಯ ಅಭಿವೃದ್ಧಿಯ ಯೋಜನೆಯ ಮಿಷನ್ ಅವಧಿಯಲ್ಲಿ ರಾಜ್ಯಕ್ಕೆ ₹ 682.48 ಕೋಟಿ ಮೊತ್ತದ ಮಂಜೂರಾದ 38 ಯೋಜನೆಗಳಲ್ಲಿ 14 ಯೋಜನೆಗಳು ಪೂರ್ಣಗೊಂಡಿವೆ. ಉಳಿದ ಯೋಜನೆಗಳನ್ನು ಮಾರ್ಚ್ 2014ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅನುಷ್ಠಾನಗೊಳಿಸುತ್ತಿರುವ 5 ನೀರು ಸರಬರಾಜು ಮತ್ತು 4 ಒಳಚರಂಡಿ ಯೋಜನೆಗಳು ಭೂವಿವಾದದ ಕಾರಣ ವಿಳಂಬವಾಗಿದ್ದು, ಡಿಸೆಂಬರ್ 2014ರೊಳಗೆ ಪೂರ್ಣಗೊಳಿಸಲು ಗುರಿಹೊಂದಲಾಗಿದೆ.